೩.೦೦ ಪಿ. ಎಂ.

The House re-assembled at Three of the Clock.

(MR. SPEAKER (SRI K. H. RANGANATH) in the Chair).

ಅಧ್ಯಕ್ಷರು.—ಈಗ ಗಮನ ಸೆಳೆಯುವ ಸೂಚನೆ... .....

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಅದಕ್ಕೂ ಮೊದಲು ನಾನು ಒಂದು ವಿಷಯ ಹೇಳಬೇಕಾಗಿದೆ.

ಅಧ್ಯಕ್ಷರು.—ಈಗ ಬೇಡ. ಬೆಫೈಟ್ ಮೀಟ್ ಬಹಳ ಸಲರು ಮಾತನಾಡುವವರಿದ್ದಾರೆಂಬ ಕಾರಣ ದಿಂದ ಈ ದಿನ ೧೨ ಗಂಟೆಗೆ ಕ್ಷಿ ಸೇರಿದ್ದೇವೆ. ಜೊತೆಗೆ ಇಪ್ಪತ್ತೈ ಪ್ರಾಶ್ನೆ ಮುತ್ತಿಗೆಳು ಉತ್ತರ ಕೊಡಬೇಕಾಗಿತ್ತು. ಆದರೆ ಹತ್ತು ನಿಮಿಷದಲ್ಲಿ ಮುಗಿಯಬೇಕಾಗಿದ್ದ ಒಂದು ವಿಚಾರದಲ್ಲಿ ಎರಡು ಗಂಟೆ ಯವರೆಗೂ ಕಳೆದಿದ್ದೇವೆ. ಆದಕಾರಣ ಈಗ ಮುಂದಿನ ವಿಷಯಕ್ಕೆ ಹೋಗೋಣ.

(ii) Requesting for Placing of a letter written by the Customs officer to Sri C. M. Ibrahim, Minister for Planning.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಅತ್ಯಂತ ಅವಶ್ಯಕವಾಗಿ ಎಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಅದೇನೆಂದರೆ, Sir, yesterday the hon. Ministe Sri Ibrahim in answer to my allegation quoted a letter which he said[r] he had received, purporting to be a letter from the customs office. If the Minister.....

MR. SPEAKER.—You can discuss with me in my chamber.

SRI A. LAKSHMISAGAR.—The letter must be placed on the table of the House. This is an important matter.

MR. SPEAKER.—I am not going to hear. Meet me in my chamber tomorrow morning.

SRI A. LAKSHMISAGAR.—In the mean while, something may happen. It is an important matter. You kindly give me patient hearing.

MR. SPEAKER.—I am sorry. Please discuss this with me tomorrow morning.

SRI A. LAKSHMISAGAR.—This is an important matter. I am on a point of order.

SRI VEERAPPA MOILY.—Where is the point of order ?

SRI A. LAKSHMISAGAR.—I will tell you.

MR. SPEAKER.—How can there be a point of order in a vacum ? We have met now after adjournment for ten minutes. There is nothing. You wanted to raise something. I said that you can discuss it in my chamber. What is the point of order ? How can there be a point of order in a vacum ?

SRI A. LAKSHMISAGAR.—My apprehension is, in the mean-while something may happen and the letter may be replaced or some thing else may happen.

MR. SPEAKER —You have done your job. In fact you have been able to participate in the discussion. You have taken sixty minutes It may be important. My request is, please come and discuss this tomorrow morning in my chamber. Hon. Member Chowdaiah.....

SRI A. LAKSHMISAGAR.—This is a simple matter. The letter must be placed on the table. That is the Rule. I am very sorry Sir, that is a very simple matter.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ಈಗ ಅವರು ಪತ್ರವನ್ನು ತಮ್ಮ ಕಡೆಗೆ ಕೊಟ್ಟಿದ್ದಾರೆ. ಒಂದು ಸಲ ಅವರು ಕೊಟ್ಟಮೇಲೆ ಅದನ್ನು ತಾವು ತಮ್ಮ ಕಸ್ಟಡಿಯಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಏಕೆಂದರೆ, ಅವರು ಅದನ್ನು ಇಲ್ಲಿ ಓದಿದ ಮೇಲೆ, ಅದು ಈ ಸಭೆಯ ಪ್ರಾಪರ್ಟಿ ಆಗುತ್ತದೆ. ಆದ್ದರಿಂದ.....

ಅಧ್ಯಕ್ಷರು.—ತಾವು ಅವರಿಂದ ಗಡಿಯಾರವನ್ನೂ ಸಹ ತೆಗೆದುಕೊಳ್ಳಿ ಎಂದು ಹೇಳಿದ್ದೀರಿ. ಈಗ ಅವರು ನನಗೆ ಪತ್ರ ಒಂದನ್ನು ಏನು ಕೊಟ್ಟಿದ್ದಾರೆ, ಅದನ್ನು ಮತ್ತೆ ವಾಪಸ್ ಕೊಡಿ ಏಂಬ ಮಾತನ್ನು ಅವರು ಹೇಳಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ರೂಲ್ ಪ್ರಕಾರ ವಾಪಸ್ ಕೊಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಇದನ್ನೆಲ್ಲಾ ತಾವು ನನ್ನ ಛೇಂಬರ್‌ನಲ್ಲಿ ಬಂದು ಮಾತನಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರದಲ್ಲಿ ತಾವು ಆ ರೀತಿ ಹೇಳುವುದಕ್ಕೆ ಬರುವುದಿಲ್ಲ. ಇಲ್ಲಿಯೇ ಪ್ರಸ್ತಾಪ ಮಾಡಬೇಕಾಗುತ್ತದೆ. ೨೦ಳ ನೇ ನಿಯಮದ ಪ್ರಕಾರ if a letter is read in the House, it is the property of the House.

ಅಧ್ಯಕ್ಷರು.—ತಾವು ಸೀನಿಯರ್ಸ್ ಮೆಂಬರ್ ಇದ್ದೀರಿ. ಈ ದಿನ ಮತ್ತೆ ಮೂರೂವರೆ ಗಂಟೆಗೆ ಬಿಸ್‌ನೆಸ್ ಅಡ್ವೈಜರಿ ಕಮಿಟಿ ಮೀಟಿಂಗ್ ಸೇರಬೇಕಾಗಿದೆ. ಹೋದ ಸಲದ ಮೀಟಿಂಗ್‌ನಲ್ಲಿ ತೆಗೆದುಕೊಂಡ ತೀರ್ಮಾನದ ಪ್ರಕಾರ ಆಯವ್ಯಯ ಪತ್ರದ ಮೇಲಿನ ಚರ್ಚೆ ಇವೊತ್ತು ಮುಗಿದು ಮಂತ್ರಿಗಳು ಉತ್ತರ ಕೊಡಬೇಕಾಗಿತ್ತು. ಈ ಕಾರಣದಿಂದಲೇ ಈವೊತ್ತು ಸಭೆ ೧೨ ಗಂಟೆಗೆ ಸೇರಿದ್ದು. ಆದರೆ ಕಾರಣಾಂತರದಿಂದ ಎರಡೂವರೆ ಗಂಟೆ ಸಮಯವನ್ನು ಬೇರೆ ವಿಚಾರಕ್ಕಾಗಿ ಕಳೆದಿದ್ದೇವೆ. ಈಗ ತಾವು ಪ್ರಸ್ತಾಪ ಮಾಡುತ್ತಿರುವ ವಿಚಾರ ಮುಖ್ಯವಾದ ವಿಚಾರ ಅಲ್ಲ ಎಂದು ನಾನು ಹೇಳುತ್ತಿಲ್ಲ. ನಿಯಮದ ಪ್ರಕಾರ ಅದು ಯೋಗ್ಯವಾದಂಥ ವಿಚಾರವೇ ಇರಬಹುದು; ಈ ಕಾರಣದಿಂದಲೇ ನಾನು ಈ ಬಗ್ಗೆ ನನ್ನ ಛೇಂಬರ್‌ನಲ್ಲಿ ಮಾತನಾಡೋಣ ಎಂದು ಹೇಳಿದ್ದು. ತಾವೂ ಕೂಡ ಬನ್ನಿ, ಮಾನ್ಯ ಲಕ್ಷ್ಮೀಸಾಗರ ಅವರೂ ಸಹ ಬರಲಿ, ಎಲ್ಲರೂ ಸೇರಿ ಇದರ ಬಗ್ಗೆ ಮಾತನಾಡೋಣ. ಈಗ ೨ಳ ನೇ ತಾರೀಖಿನ ದಿವಸ ಆಯವ್ಯಯದ ಮೇಲೆ ಮಾತನಾಡಬೇಕಾಗಿದ್ದವರು, ಅವಕಾಶ ಸಿಗದೆ ಇವೊತ್ತಿನವರೆಗೂ ಕಾಯುತ್ತಿದ್ದಾರೆ. ಆದಕಾರಣ ಅವರಿಗೆಲ್ಲಾ ಅವಕಾಶ ಮಾಡಿಕೊಡಬೇಕಾಗಿದೆ.

ಶ್ರೀ ಪಿ. ರಾಮದೇವ್.—ನಮ್ಮ ಪಕ್ಷದಿಂದ ೧೩ ಜನರು ಮಾತನಾಡಬೇಕಾಗಿತ್ತು ಆದರೆ ಇಲ್ಲಿಯವರೆಗೆ ಇಬ್ಬರಿಗೆ ಮಾತ್ರ ಮಾತನಾಡಲು ಅವಕಾಶ ಸಿಕ್ಕಿದೆ.

ಅಧ್ಯಕ್ಷರು.—ಹಾಗೆ ಲೆಕ್ಕ ಹಾಕುವುದಾದರೆ, ಇಲ್ಲಿರುವಂತಹ ಸದಸ್ಯರನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡು, ಸಮಯ ನಿಗದಿ ಮಾಡುವುದಾದರೆ..... In fact you have taken more than half the time allowed for the discussion.

(iii) Short Weighment of Cement Packed by Ammasandra Cement Factory.

ಶ್ರೀ ಎಚ್. ಡಿ. ಚೌಡಯ್ಯ.—ಮಾನ್ಯ ಅಧ್ಯಕ್ಷರೇ, ಅಮ್ಮಸಂದ್ರ ಸಿಮೆಂಟ್ ಕಾರ್ಖಾನೆಯಿಂದ ಹೊರಬರತಕ್ಕಂಥ ಸಿಮೆಂಟಿನ ತೂಕದಲ್ಲಿ ಮೋಸವಾಗುತ್ತಿದೆ. ನೆನ್ನೆ ದಿವಸ ನನ್ನ ಎದುರಿಗೆ ಮಂಡ್ಯದಲ್ಲಿ ಅವರು ಕಳುಹಿಸಿದ ೧೦ ಟನ್ ಸಿಮೆಂಟ್‌ನ್ನು ತೂಕ ಹಾಕಿ ನೋಡಿದಾಗ, ೮ ಟನ್ ಮಾತ್ರ ಇತ್ತು.